ಮೂಲ ದಾವಾ ಸಂಖ್ಯೆ. 159/2019 ಪಿ ಡಬ್ಲ್ಯೂ 1
(ದಿನಾಂಕ 18-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)
ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ನಿಪಿ-9 ರಂತೆ ನಮ್ಮ ವಂಶವೃಕ್ಷ ಸರಿ ಇರುತ್ತದೆ. ಸದರಿ ವಂಶವೃಕ್ಷದಂತೆ ಎಲ್ಲರನ್ನು ಪಕ್ಷಗಾರರು ಅಂತಾ ಮಾಡಿಲ್ಲ. ನಮ್ಮ ಹಿಸ್ಸೆಗೆ ಯಾರು ಜಮೀನು ಕೊಟ್ಟಿದ್ದಾರೆ ಅವರಿಗೆ ಮಾತ್ರ ಪಕ್ಷಗಾರರು ಅಂತಾ ಮಾಡಿರುತ್ತೇನೆ. ಗೌರಮ್ಮ ಇವರಿಗೆ ಕೊಟ್ರಬಸಪ್ಪ, ಮಲ್ಲಪ್ಪ, ನಾಗಪ್ಪ, ಕೊಟ್ರಮ್ಮ ಮತ್ತು ಇನ್ನೊಬ್ಬ ಮಕ್ಕಳು ಇರುತ್ತಾರೆ. ಬಸಮ್ಮ ಇವರಿಗೆ 3 ಜನ ಗಂಡು ಮಕ್ಕಳು ಮತ್ತು 3 ಜನ ಹೆಣ್ಣು ಮಕ್ಕಳು ಅವರೆಂದರೆ ಸಿದ್ದಲಿಂಗಪ್ಪ, ಚನ್ನಬಸಪ್ಪ, ವೀರಣ್ಣ, ಕೊಟ್ರಮ್ಮ, ಕಾಳಮ್ಮ ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ.

ನನ್ನ ತಂದೆ ಈರಣ್ಣ ಇವರಿಗೆ ನಾವು ಒಟ್ಟು 4 ಜನ ಮಕ್ಕಳು ಅವರೆಂದರೆ ಕೇದಾರನಾಥ ನಾನು, ದೊಡ್ಡಬಸಪ್ಪ, ಮಲ್ಲಮ್ಮ ಮತ್ತು ಈರಮ್ಮ ಇರುತ್ತಾರೆ. ಬಸಮ್ಮ ಮತ್ತು ಗೌರಮ್ಮ ಇವರ ಎಲ್ಲಾ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರು ಅಂತಾ ಮಾಡಿಲ್ಲ.

ದಾವಾಸ್ತಿಯು ನಮಗೆ ನಮ್ಮ ತಂದೆಯ ತಾಯಿ ಬಸಮ್ಮ ಇವರಿಂದ ಬಂದಿರುತ್ತದೆ. ದಾನಪತ್ರವನ್ನು ಬಸಮ್ಮ ಮತ್ತು ಗೌರಮ್ಮ ಇವರ ತಂದೆ ಕೊಳಚಿ ಕಲಿವೀರಪ್ಪ ಇವರು ಬಸಮ್ಮ ಮತ್ತು ಗೌರಮ್ಮ ಇವರ ಹೆಸರಿಗೆ ಬರೆದುಕೊಟ್ಟಿರುತ್ತಾರೆ. ದಾನಪತ್ರವಾಗುವ ಸಮಯದಲ್ಲಿ ದಾವಾಸ್ತಿ ಸದರಿ ಕಲಿವೀರಪ್ಪ ಇವರ ಹೆಸರಿನಲ್ಲಿ ದಾಖಲಿತ್ತು. ಸದರಿ ಕಲಿವೀರಪ್ಪ ಇವರ ಹೆಸರಿಗೆ ದಾಖಲಿತ್ತು ಎನ್ನುವ ಬಗ್ಗೆ ನಾನು ಡಯಗ್ಲಾಟನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ಸದರಿ ಕಲಿವೀರಪ್ಪ ಮತ್ತು ಬಸಮ್ಮ ಹಾಗೂ ಗೌರಮ್ಮ ಇವರ ಹೆಸರಿನಲ್ಲಿ ದಾವಾಸ್ತಿಯ ಪಹಣಿಗಳು ದಾಖಲಿಲ್ಲ ಆದರೆ ಇ ಸಿ ಯಲ್ಲಿ ಅವರ ಹೆಸರು ನಮೂದು ಇದೆ. ಕಲಿವೀರಪ್ಪ ಇವರ ಹೆಸರಿಗೆ ದಾವಾಸ್ತಿ ದಾಖಲು ಇರಲಿಲ್ಲ ಆದ್ದರಿಂದ ಅವನಿಗೆ ದಾವಾಸ್ತಿಯ ದಾನಪತ್ರವನ್ನು ಬರೆದುಕೊಡುವ ಯಾವುದೇ ಅಧಿಕಾರ ಇರಲಿಲ್ಲವೆಂದರೆ ಸರಿಯಲ್ಲ. ನಿಪಿ-3 ರಂತೆ ದಾವಾಸ್ತಿಯು ಕಲಿವೀರಪ್ಪ ಇವರ ಹಸರಿನಲ್ಲಿ ದಾಖಲಿರಲಿಲ್ಲವೆಂದರೆ ಸರಿಯಲ್ಲ.

ನಿಪಿ-1 ಮತ್ತು 2 ದಾಖಲೆಗಳು ಪ್ರತಿವಾದಿ ನಂ.1 ರಿಂದ 3 ರವರ ಹೆಸರಿನಲ್ಲಿ ದಾಖಲಿವೆ. ಸುಮಾರು 5-6 ವರ್ಷದಿಂದ ಅವರ ಹೆಸರಿಗೆ ಪಹಣಿ ದಾಖಲಾಗಿದೆ ನಮಗೆ ಗೊತ್ತಿಲ್ಲದ ಹಾಗೆ ಮಾಡಿಸಿಕೊಂಡಿರುತ್ತಾರೆ. 3 ನೇ ಪ್ರತಿವಾದಿ ಈಗ ಒಂದು ವರ್ಷದ ಅವಧಿಯ ಒಳಗಾಗಿ ಮೃತಪಟ್ಟಿರುತ್ತಾರೆ.

(ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ